ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ,ಪದವಿಪೂರ್ವ ಶಿಕ್ಷಣ ಇಲಾಖೆ,18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ:ಪಪೂಶಿಇ/ಶೈಶಾ-04/ಪು.ಖ.ಅ.ನೀ.ಕು/2015-16 ದಿನಾಂಕ: 18 .12.2015.

**ಸುತ್ತೋಲೆ**

ವಿಷಯ: ಡ್ರೀಮ್ ವರ್ಲ್ಡ್ ಇಂಡಿಯಾ ರವರು ಪ್ರಕಟಿಸಿರುವ ಪುಸ್ತಕಗಳನ್ನು ಪದವಿ ಪೂರ್ವ ಕಾಲೇಜುಗಳ ಗ್ರಂಥಾಲಯಗಳಿಗೆ ಖರೀದಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಶಿಕ್ಷಣ ಮಂತ್ರಿಗಳ ಟಿಪ್ಪಣಿ ಸಂಖ್ಯೆ: ಪ್ರಾ& ಪ್ರೌ.ಶಿ.ಸ/4220/2015. ದಿನಾಂಕ:26-11-2015.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಟಿಪ್ಪಣಿಯಲ್ಲಿ ಮಾನ್ಯ ಮಂತ್ರಿಗಳು ಡ್ರೀಮ್ ವರ್ಲ್ಡ್ ಇಂಡಿಯಾ, ವಿನಾಯಕ ನಗರ, ಬೆಂಗಳೂರು. ರವರು ಪ್ರಕಟಿಸಿರುವ ಪುಸ್ತಕಗಳನ್ನು ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಪದವಿ ಪೂರ್ವ ಕಾಲೇಜುಗಳ ಗ್ರಂಥಾಲಯಗಳಿಗೆ ಖರೀದಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಸದರಿ ಸಂಸ್ಥೆಯವರು ಪುಸ್ತಕ/ಸಿಡಿ ಹಾಗೂ ಡಿವಿಡಿ ಗಳ ನಮೂದಿಸಿದ ಬೆಲೆಯ ಮೇಲೆ ಶೇ 40 ರಿಂದ ಶೇ.50ರ ವರೆಗೆ ರಿಯಾಯಿತಿ ದರದಲ್ಲಿ ನೀಡಲು ಒಪ್ಪಿರುವುದರಿಂದ ರಾಜ್ಯದ ಸರ್ಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ಲಭ್ಯವಿರುವ ಆರ್.ಆರ್./ಸಂಚಿತ ನಿಧಿಯಿಂದ ಕಾಲೇಜಿನ ಗ್ರಂಥಾಲಯಗಳಿಗೆ /ವಿದ್ಯಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ಪರಿಶೀಲಿಸಿ, ನಿಯಮಾನುಸಾರ ಖರೀದಿಸಲು ಅನುಮತಿ ನೀಡಿದೆ. ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಪುಸ್ತಕಗಳನ್ನು ಖರೀದಿಸಲು ಅಗತ್ಯ ಕ್ರಮ ವಹಿಸಲು ಸೂಚಿಸುವಂತೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸದರಿಯವರನ್ನು ಸಂಪರ್ಕಿಸುವುದು : Dream World India , # 85, SMR Arcade, Vinayaka Nagar, Hebbal, Beside Viva Toyota Showroom, Bangalore-560024, Contact No : +918023432702/704/706.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

**ಮುಂದಿನ ಸೂಕ್ತ ಕ್ರಮಕ್ಕಾಗಿ:**

ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರ ಮೂಲಕ ಸರ್ಕಾರಿ/ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು ಮಾಹಿಗಾಗಿ:**

1. ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ವಿಧಾನ ಸೌಧ, ಬೆಂಗಳೂರು.
2. ನಿರ್ದೇಶಕರ ಆಪ್ತಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ.
3. ಇ-ಆಡಳಿತ, ಪದವಿಪೂರ್ವ ಶಿಕ್ಷಣ ಇಲಾಖೆ, ರವರಿಗೆ ಅಂತರಜಾಲದಲ್ಲಿ ಅಳವಡಿಸಲು.
4. ಕಛೇರಿ ಪ್ರತಿ